

**ಭೈರವನಾಥ ಮಂದಿರ**

ಹಾಸಿಗೆಯಲ್ಲಿ ಚೆನ್ನಾಗಿ ಹೊದ್ದು ಮಲಗಿರಬೇಕೆಂದು ಅನ್ನಿಸುತ್ತದೆ. ಅಂಥ ಚಳಿಯಲ್ಲಿ ನಿದ್ದೆ ಹತ್ತಿಕೊಂಡರೆ ಹೊತ್ತುಗೊತ್ತು ಏನೂ ತಿಳಿಯದು.

ಸಾಯಂಕಾಲ ಸುಮಾರು ನಾಲ್ಕುಗಂಟೆಯ ಹೊತ್ತಿಗೆ ಹೊರ ಬಂದು ನೋಡಿದರೆ, ಸಣ್ಣಗೆ ಮಳೆ ಜಿನುಗುತ್ತಿತ್ತು. ಭೈರವನಾಥನ ಮಂದಿರವಿರುವುದು ಕೇದಾರನಾಥ ಮಂದಿರದಿಂದ ಪೂರ್ವಭಾಗಕ್ಕಿರುವ ಒಂದು ಪರ್ವತದ ಮೇಲೆ. ಅಲ್ಲಿಗೆ ಹೋದಾಗ, 'ಮಳೆ ಹೆಚ್ಚಾದರೆ ಏನುಗತಿ?' ಎಂದು ಭಾವಿಸಿದರೂ, ರೈನ್‌ಕೋಟ್ ಇದೆಯಲ್ಲ, ಹೇಗಾದರೂ ನೋಡಿ ಬರುವುದೇ, ಎಂದು ಹೊರಟೇಬಿಟ್ಟೆವು.

ಅಂಗಡಿಗಳು, ಪ್ರವಾಸೀ ಬಂಗಲೆ, ಲಾಡ್ಜು ಇತ್ಯಾದಿಗಳನ್ನೆಲ್ಲ ದಾಟಿ, ಖಾಲಿ ಮೈದಾನ ಪ್ರದೇಶಕ್ಕೆ ಬಂದು ಬೆಟ್ಟವೇರತೊಡಗಿದಾಗ ಕೇದಾರನಾಥ ಮಂದಿರ ಹಾಗೂ ಸುತ್ತಮುತ್ತಲಿನ ಕಟ್ಟಡಗಳೆಲ್ಲ ಸ್ಪಷ್ಟವಾಗಿ ಕಾಣಿಸತೊಡಗಿದವು. ತುಸು ದೂರದಲ್ಲಿ ಎರಡು ಹೆಲಿಪ್ಯಾಡ್, ಬಂದುಹೋಗುತ್ತಿರುವ ಹೆಲಿಕಾಪ್ಟರ್‌ಗಳು, ಅಲ್ಲಿಗೆ ಹೋಗುವ - ಬರುವ ಯಾತ್ರಿಕರೆಲ್ಲಾ ಕಾಣಿಸಿದರು. ಸ್ವಲ್ಪ ಹೊತ್ತಿನಲ್ಲೇ ಮಳೆ ಜೋರಾಯಿತು. ರೈನ್‌ಕೋಟ್ ಮೊದಲೇ ಹಾಕಿಕೊಂಡಿದ್ದೆವು. ಆದರೂ ಮಳೆ ಜೋರಾದಂತೆಲ್ಲ ಚಳಿ ಅಸಾಧ್ಯವೆನಿಸಿತು. ಜೋರಾಗಿ ನಡೆದರೆ ಮೈ ಬೆಚ್ಚಗಾಗಿ ಚಳಿಯ ಅನುಭವವೂ ಕಡಿಮೆಯಾದೀತೆಂದು ಜೋರಾಗಿ ಬೆಟ್ಟವನ್ನೇರತೊಡಗಿದೆವು. ಸ್ವಲ್ಪದೂರದಲ್ಲಿ ಭೈರವನಾಥನ ಮಂದಿರ. ಎತ್ತರವಾದ ವೇದಿಕೆಯ ಮೇಲೆ ಸ್ಥಾಪಿಸಲಾಗಿದ್ದ ಐದಾರು ಶಿಲೆಯ ವಿಗ್ರಹಗಳಿಗೆ ಗಂಧ, ಕುಂಕುಮ ಹಚ್ಚಿದ್ದರು. ಅಲ್ಲೇ ಪ್ರವೇಶದ್ವಾರದಲ್ಲಿ ಇದ್ದ ಗಂಟೆ ಬಾರಿಸಿ, ಕೇದಾರನಾಥದ ರಕ್ಷಕ ದೇವತೆಗೆ ನಮ್ಮ ನಮನ ಸಲ್ಲಿಸಿ ಕೃತಾರ್ಥರಾದೆವು.

ಚಳಿ ತಡೆಯಲಸಾಧ್ಯವಾಗಿತ್ತು. ಕೈಗಳಲ್ಲಿ ರಕ್ತದ ಓಡಾಟ ನಿಂತು ಹೋಗಿ ಮರಗಟ್ಟಿಬಿಟ್ಟಿದ್ದವು. ಎರಡೂ ಕೈಗಳನ್ನು ಉಜ್ಜಿಕೊಂಡು ರಕ್ತ ಸಂಚಾರ ಮತ್ತೆ ಆರಂಭವಾಗುವಂತೆ ಮಾಡಿದೆ. ಪರ್ವತವಿಳಿದು, ಮರಳಿ ಕೇದಾರನಾಥಕ್ಕೆ ಬರುವಷ್ಟರಲ್ಲಿ ಸಾಕುಸಾಕಾಯಿತು. ಅಂದು ರಾತ್ರಿ ವಿಪರೀತ ಮಳೆ ಸುರಿದಿದ್ದರಿಂದ ನಾವು ಹೆಚ್ಚೇನೂ ಓಡಾಡದೆ, ಕೋಣೆಯಲ್ಲೇ ಮಲಗಿ ವಿಶ್ರಾಂತಿ ಪಡೆದೆವು.

ಮರುದಿನ ಪ್ರಾತಃಕಾಲ ಇನ್ನೊಮ್ಮೆ ಕೇದಾರನಾಥನ ದರ್ಶನ ಮಾಡಿ, ಚಂದ್ರಶೇಖರ ಪಂಡಾ ಮಾಡಿಕೊಟ್ಟ ಬಿಸಿಬಿಸಿ ಚಹಾ ಕುಡಿದು, ಮರಳಿ ಗೌರೀಕುಂಡಕ್ಕೆ ಹೊರಟೆವು. ದಾರಿ ಮಧ್ಯೆ ನನಗೆ ತಡೆಯಲಸಾಧ್ಯವಾದ ವಾಂತಿಭೇದಿ ಶುರುವಾಗಿ, ತುಂಬಾ ತೊಂದರೆಯಾಯಿತು. ಮಣಭಾರ ಲಗೇಜು ಬೇರೆ. ನಡುನಡುವೆ ವಿಶ್ರಾಂತಿ ತೆಗೆದು ಕೊಂಡು, ನಿತ್ರಾಣವಾದಾಗ ಕಣ್ಣುಕತ್ತಲೆ ಬಂದಂತಾಗಿ ಸುಧಾರಿಸಿಕೊಳ್ಳಬೇಕಾಯಿತು. ನನ್ನ ಅವಸ್ಥೆಯನ್ನು ನೋಡಿದ ಕರುಣಾಕರಾನಂದರು, ''ಬನ್ನಿ, ನಿಮಗೆ ಒಂದು ಕುದುರೆ ಬುಕ್ ಮಾಡುತ್ತೇನೆ. ನೀವು ನಡೆಯಲಾರಿರಿ'' ಎಂದರು. ನನಗೆ ಕುದುರೆಯ ಮೇಲೆ ಯಾತ್ರೆ ಹೊರಟವರ ಯಾತನೆ ಕೇಳಿ ಗೊತ್ತು. ಮೊದಲು ಸ್ವಲ್ಪಹೊತ್ತು ಯಾತ್ರೆ ಚೆನ್ನಾಗಿರುತ್ತದೆ. ಅನಂತರ ಹಿಂಭಾಗ ಪೂರ್ತಿಯಾಗಿ ಕಿತ್ತು ಬರುವಂತಾಗುತ್ತದೆ. ಎಷ್ಟೇ ತೊಂದರೆಯಾಗಲಿ, ನಡೆಯುವುದೇ ಸರಿ ಎಂದುಕೊಂಡು ಹೇಗೋ ನಡೆಯುತ್ತಾ ಹೊರಟೆ. ೫.೩೦ಕ್ಕೆ ಹೊರಟ ವರು ೮.೩೦ - ೯.೦೦ ರ ನಡುವೆ ತಲುಪಬೇಕಾಗಿತ್ತು; ಅದರೆ ಈಗ ನಾವು ಗೌರೀಕುಂಡ ತಲುಪಿದಾಗ ೧೧.೩೦ ಆಗಿಬಿಟ್ಟಿತ್ತು. ಅಂದು ಮಧ್ಯಾಹ್ನವೇ ಮುಂದಿನ ಕೇದಾರಕ್ಕೆ (ಮದ್ದಮಹದೇಶ್ವರ) ಹೊರಡಬೇಕೆಂದುಕೊಂಡಿದ್ದೆವು. ನನಗೆ ವಿಪರೀತ ನಿಶ್ಶಕ್ತಿ, ಅನಾರೋಗ್ಯ. ಅಂದಂತೂ ಹೇಗೂ ಹೊರಡುವಂತಿರಲಿಲ್ಲ. ಭಾರತ ಸೇವಾಶ್ರಮಕ್ಕೆ ಮರಳಿ ಬಂದೆವು. ಅಲ್ಲಿನ ಸ್ವಾಮಿಗಳು ಏನೋ ಔಷಧಿ ಕೊಟ್ಟರು. ಅದರಿಂದ ಹೆಚ್ಚೇನೂ ಉಪಯೋಗವಾಗಲಿಲ್ಲ. ಮರುದಿನವೂ ನಾವು ಗೌರೀಕುಂಡದಲ್ಲಿ ತಂಗಬೇಕಾಯಿತು. ಅಂದು ಬೆಳಗ್ಗೆ ಮೆಡಿಕಲ್ ಶಾಪ್‌ನಲ್ಲಿ ಪರೀಕ್ಷೆ ಮಾಡಿಸಿಕೊಂಡೆ. ಅವರು ಒಳ್ಳೆಯ ಔಷಧವನ್ನೇ ಕೊಟ್ಟಿದ್ದರು. ಮರುದಿನ ಬೆಳಗ್ಗೆ, ಅಂದರೆ ೧೧ನೇ ತಾರೀಖಿನಂದು ನಾನು ಮುಂದಿನ ಪ್ರಯಾಣಕ್ಕೆ ತಯಾರಾಗಿಬಿಟ್ಟಿದ್ದೆ. ಹಿಂದಿನ ದಿನ ಗೌರೀಕುಂಡದಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾಗ, 'ಹೇಗಾದರೂ ನಾನು ಮುಂದಿನ ಪ್ರಯಾಣ ಮುಂದುವರೆಸುವಂತಾಗಲಿ' ಎಂದು ದೇವರನ್ನು ಪ್ರಾರ್ಥಿಸಿಕೊಂಡಿದ್ದೆ. ಆರೋಗ್ಯ ಇನ್ನಷ್ಟು ಹದಗೆಟ್ಟಿದ್ದರೆ ಪಂಚಕೇದಾರ ಯಾತ್ರೆ ಪೂರ್ಣಗೊಳ್ಳದೆ ಹೋಗುತ್ತದಲ್ಲಾ ಎಂದು ನಾನು ದುಃಖಿಸಿದ್ದೆ. ಜಗನ್ಮಾತೆಯ ಕೃಪೆ, ಹಾಗಾಗಲಿಲ್ಲ.

*(ಮುಂದುವರಿಯುವುದು)*

ನಿನ್ನ ಮನಸ್ಸಿಗಿಂತ ಉತ್ತಮ ಗುರು ಇನ್ನೊಬ್ಬನಿಲ್ಲವೆಂದೇ ತಿಳಿ! ಪ್ರಾರ್ಥನೆ, ಧ್ಯಾನಗಳಿಂದ ಮನಸ್ಸು ಪರಿಶುದ್ಧವಾದಾಗ ಅದು ನಿನ್ನನ್ನು ಒಳಗಿನಿಂದಲೇ ಸರಿಯಾದ ಮಾರ್ಗದಲ್ಲಿ ಮುನ್ನಡೆಸುವುದು. ನಿನ್ನ ದೈನಂದಿನ ಚಟುವಟಿಕೆಗಳ ನಡುವೆ ಕೂಡ ಈ ಅಂತರಂಗದ ಗುರು, ನೀನು ಗುರಿ ತಲುಪುವವರೆಗೂ ದಾರಿ ತೋರುವನು. ದೇವರ ಮೇಲೆ ಎಣೆಯಿಲ್ಲದ ಪ್ರೀತಿಯನ್ನು ಹೊಂದಿರು, ಆಗ ನಿನ್ನ ಮನಸ್ಸು ಯಾವಾಗಲೂ ಶಾಂತವಾಗಿಯೂ, ಶುದ್ಧವಾಗಿಯೂ ಇರುವುದು.

*– ಸ್ವಾಮಿ ಬ್ರಹ್ಮಾನಂದ*

# ಅಸಿಸ್ಸಿಯ ಸಂತ ಫ್ರಾನ್ಸಿಸ್

ಭಾಗ ೧

ಸ್ವಾಮಿ ವೀರೇಶಾನಂದ

ಇಟೆಲಿಯ ಒಬ್ಬ ಕ್ರೈಸ್ತ ಸಂತನು ಗುಬ್ಬಿಯೊ ಎಂಬ ನಗರಕ್ಕೆ ಹೋದನು. ಅಲ್ಲಿ ಸ್ವಲ್ಪಕಾಲ ವಸತಿ ಹೂಡಿದನು. ಆ ಕಾಲದಲ್ಲಿ ಆ ಊರಿನಲ್ಲಿ ಒಂದು ಸಮಸ್ಯೆ ತಲೆದೋರಿತ್ತು. ಒಂದು ತೋಳ ಊರಿಗೆ ಬಂದು ಜನರನ್ನು ಹೆದರಿಸುತ್ತಿತ್ತು. ಸಾಕುಪ್ರಾಣಿಗಳನ್ನಲ್ಲದೆ ಮನುಷ್ಯರನ್ನೂ ಕಬಳಿಸುತ್ತಿತ್ತು. ಸಂತನಿಗೆ ಊರ ಜನರ ದುರವಸ್ಥೆಯನ್ನು ಕಂಡು ಅನುಕಂಪ ಹುಟ್ಟಿತು. ಅವನು ಊರಿನ ಹತ್ತಿರದ ಗುಡ್ಡವನ್ನು ಹತ್ತಿದನು. ಆ ಕ್ರೂರಜಂತುವನ್ನು ತಾನೇ ಹುಡುಕಿಕೊಂಡು ನಡೆದನು. ತೋಳದ ಭಯದಿಂದ ಅವನ ಸಂಗಾತಿಗಳೆಲ್ಲ ಕಾಲುಕಿತ್ತರು. ಇವನು ಮಾತ್ರ ಏಕಾಂಗಿಯಾಗಿ ನಡೆದುಕೊಂಡು ಹೋಗುತ್ತಲೇ ಇದ್ದನು. ಕಡೆಗೆ ತೋಳ ಅವನಿಗೆ ಸಿಕ್ಕಿಯೇ ಬಿಟ್ಟಿತು. ಅವನು ಶಿಲುಬೆಯ ಸಂಜ್ಞೆಯನ್ನು ಮಾಡಿ, ತನ್ನ ಹತ್ತಿರ ಬರುವಂತೆ ಹೇಳಿದನು. ಯಾರನ್ನೂ ಹಿಂಸಿಸಬೇಡೆಂದು ಅದಕ್ಕೆ ಆದೇಶವಿತ್ತನು. ಸಂತನ ಆಧ್ಯಾತ್ಮಿಕ ಶಕ್ತಿಯ ಎದುರಿಗೆ ಆ ಭೀಕರ ತೋಳವು ಮಣಿಯಿತು. ಆ ಕ್ರೂರ ಜಂತುವು ಸಂತನ ಪಾದದಡಿಯಲ್ಲಿ ವಿನಮ್ರವಾಗಿ ಬಿದ್ದುಕೊಂಡಿತು. ತನ್ನ ಸಾಂತ್ವನಭರಿತ ಮಧುರ ಮಾತುಗಳ ಮೂಲಕ ಆ ಸಂತನು ಹೀಗೆಂದನು: ''ಅಪ್ಪಾ ಸಹೋದರ ತೋಳವೇ, ಇಲ್ಲಿನ ಜನರಿಗೆ ಅದೆಷ್ಟು ತೊಂದರೆ ಕೊಟ್ಟಿರುವೆ ನೀನು! ಓ, ಅದೆಷ್ಟು ಕೇಡುಕನ್ನು ಉಂಟುಮಾಡಿರುವೆ ನೀನು! ಎಲ್ಲರೂ ನಿನ್ನನ್ನು ನಿಂದಿಸುವವರೇ. ಎಲ್ಲರೂ ನಿನಗೆ ಶಪಿಸುವವರೇ. ಆದರೆ ನಾನು ಹಾಗೆ ಮಾಡುವುದಿಲ್ಲ. ನೀನು ಮತ್ತು ಇಲ್ಲಿನ ಜನರ ನಡುವೆ ಶಾಂತಿ ಉಂಟುಮಾಡಲು ಬಂದವನು ನಾನು.''

ಹೀಗೆಂದು ಆ ಸಂತನು ತೋಳವನ್ನು ಊರಿಗೆ ಕರೆದುಕೊಂಡು ಹೋದನು. ಆಶ್ಚರ್ಯಚಕಿತರಾದ ಜನರು ಅವನನ್ನು ಸುತ್ತುವರಿದರು. ಸಂತನು ತೋಳ ಮತ್ತು ಜನರ ನಡುವೆ ಶಾಂತಿ ಒಪ್ಪಂದ ಮಾಡಿಸಿದನು. ತೋಳವು ಹಸಿವೆಯಿಂದ ತಾನೇ ಈ ಬಗೆಯ ಕ್ರೂರಕಾರ್ಯ ಮಾಡಿದ್ದು! ಜನರೆಲ್ಲ ನಿಯಮಿತವಾಗಿ ತೋಳಕ್ಕೆ ಆಹಾರ ಒದಗಿಸಿಕೊಡಬೇಕು. ತೋಳವು ಇನ್ನುಮುಂದೆ ಜನರ ಮೇಲೆ ಹಲ್ಲೆ ಮಾಡುವುದನ್ನು ನಿಲ್ಲಿಸಬೇಕು. ಇದೇ ಆ ಒಪ್ಪಂದ. ಹೀಗೆ ಗುಬ್ಬಿಯೊ ಎಂಬ ಆ ಊರು ತೋಳದ ಹಾವಳಿಯಿಂದ ಮುಕ್ತವಾಯಿತು. ಇದಲ್ಲದೆ ಊರಿನ ನಾಯಿಗಳು ಮತ್ತು ಆ ತೋಳದ ನಡುವೆಯೂ ಆ ಸಂತನು ಶಾಂತಿ ಒಪ್ಪಂದವನ್ನು ಮಾಡಿಸಿದನು. ಊರಿನ ನಾಯಿಗಳು ತೋಳದ ಮೇಲೆ ದಾಳಿ ಮಾಡದಂತೆ ವಿಧಿಸಿದನು. ಇನ್ನುಮುಂದೆ ತೋಳವು ಯಾವುದೇ ತೊಂದರೆ ಕೊಡುವುದಿಲ್ಲವೆಂಬುದಕ್ಕೆ ಸಾಕ್ಷಿಯಾಗಿ ಆ ತೋಳವನ್ನು ಕ್ರೈಸ್ತಧರ್ಮದ ವಿಧಿಯಂತೆ ಅನುಗ್ರಹಿಸಿದನು.

ಅಷ್ಟು ಮಾತ್ರವಲ್ಲ, ಈ ಸಂತನು ಭಗವಂತನ ಸೃಷ್ಟಿಯೆಲ್ಲವನ್ನೂ ತನ್ನ ಬಂಧುಗಳೆಂದೇ ಎಣಿಸಿದ್ದನು. ಒಮ್ಮೆ ಅವನು ತನ್ನ ಸಂಗಡಿಗರೊಡನೆ ನಡೆದುಹೋಗುತ್ತಿದ್ದನು. ಎರಡೂ ಕಡೆ ಮರಗಳ ತುಂಬೆಲ್ಲ



ತೋಳದೊಂದಿಗೆ ಮಾತುಕತೆ

ಪಕ್ಷಿಗಳು ನೆರೆದಿದ್ದ ರಸ್ತೆಯೊಂದನ್ನು ತಲುಪಿದನು. ತನ್ನ ಸಹಚರರಿಗೆ ಹೇಳಿದನು, ''ಇಲ್ಲೇ ಇರಿ. ನಾನು ನನ್ನ ಅಕ್ಕತಂಗಿಯರಾದ ಪಕ್ಷಿಗಳಿಗೆ ಉಪದೇಶ ಕೊಟ್ಟು ಬರುತ್ತೇನೆ.'' ಮುಂದೆ ನಡೆದ ಸಂತನು ತನ್ನ ಕರುಣಾಪೂರಿತ ಮಾರ್ದವ ಧ್ವನಿಯಿಂದ ಉಪದೇಶಿಸಲು ಆರಂಭಿಸಿದನು. ಅವನ ಸುತ್ತಲೂ ಪಕ್ಷಿಗಳು ನೆರೆದವು. ತಮಗೆ ಚಿರಪರಿಚಿತರೆಂಬಂತೆ ಸಲುಗೆಯಿಂದ ಅವನೊಡನೆ ವರ್ತಿಸಿದವು. ಅವನ ಉಪದೇಶವನ್ನು ಆಲಿಸಿದವು. ಅವುಗಳಲ್ಲಿ ಒಂದು ಪಕ್ಷಿ ಕೂಡ ಹಾರಿ ಹೋಗಲಿಲ್ಲ. ಆ ಸಂತನ ಕೆಲವು ಚಿತ್ರಗಳಿವೆ. ಅವುಗಳಲ್ಲಿ ಅವನು ಪಕ್ಷಿಗಳಿಗೆ ಉಪದೇಶಿಸುತ್ತಿರುವ ದೃಶ್ಯ ಕಂಡುಬರುತ್ತದೆ.

ಈ ಮೃದುಮಧುರ ಸ್ವಭಾವದ ಸಂತನು ಬಡವರ ಬಂಧುವಾಗಿದ್ದನು. ಬಡತನದ ಜೀವನವನ್ನು ತಾನಾಗಿಯೇ ಅಪ್ಪಿಕೊಂಡಿದ್ದನು. ಪ್ರಾಣಿಗಳು, ಪಕ್ಷಿಗಳು, ಗಿಡಮರಗಳು, ನೈಸರ್ಗಿಕ ಶಕ್ತಿಗಳಾದ ಸೂರ್ಯ ಮತ್ತು ಚಂದ್ರರಿಗೆ ಕೂಡ ಗೌರವವನ್ನು ಕೊಡುತ್ತಿದ್ದನು. 'ಓ ನನ್ನ ಸಹೋದರ ಸೂರ್ಯ, ಓ ನನ್ನ ಸಹೋದರಿ ಚಂದ್ರ' ಎಂದು ನಿರ್ಮಲ ಮನಸ್ಸಿನಿಂದ ನುಡಿಯುತ್ತಿದ್ದನು. ಇಂಥ ಅದ್ಭುತ ಸುಂದರ ಪ್ರಕೃತಿಯ ಬಾಂಧವ್ಯಕ್ಕಾಗಿ ಭಗವಂತನನ್ನು ಕೊಂಡಾಡುತ್ತಿದ್ದನು. ಭಗವಂತನಲ್ಲಿ ನೆಲೆಯಿಟ್ಟ ಮನಸ್ಸಿನಿಂದ ನಾವು ಶಾಂತಿಯನ್ನು ಪಡೆದುಕೊಂಡರೆ, ಆಗ ನಮ್ಮ ಸುತ್ತಮುತ್ತಲ ನಿಸರ್ಗದ ಜೊತೆಗೂ ನಾವು ಶಾಂತಿಯಿಂದ ಇರಬಹುದು; ಇದರಿಂದ ನಮ್ಮ ಸುತ್ತಲ ಜನಗಳ ನಡುವೆಯೂ ಶಾಂತಿ ಏರ್ಪಡುತ್ತದೆ ಎಂದು ಅವನು ತೋರಿಸಿಕೊಟ್ಟನು.

ಈ ಸಂತನು 'ಬಡತನ'ವನ್ನು ತನ್ನ ನಿರಂತರ ಸಂಗಾತಿಯನ್ನಾಗಿ ಮಾಡಿಕೊಂಡಿದ್ದನು. 'ಬಡತನವೆಂಬ ಸ್ತ್ರೀರತ್ನ ನನ್ನ ಸಂಗಾತಿ' ಎಂದು ಹೇಳಿಕೊಳ್ಳುತ್ತಿದ್ದನು. ಕ್ರೈಸ್ತ ಸಾಧುಸಂನ್ಯಾಸಿಗಳಲ್ಲಿ ಈ ಮಹಾನ್



**ಪಕ್ಷಿಗಳಿಗೆ ಉಪದೇಶ**

ಸಂತನು ಚಿರದೀವಿಗೆಯಂತೆ ಇದ್ದಾನೆ. ತನ್ನ ಅಚ್ಚಳಿಯದ ಪ್ರಭಾವವನ್ನು ಇನ್ನೂ ಅದೃಶ್ಯವಾಗಿ, ನೀರವವಾಗಿ ಬೀರುತ್ತಲೇ ಇದ್ದಾನೆ. ಅವನೇ ಇಟಲಿಯ ಮಹಾನ್ ದಾರ್ಶನಿಕ ಸಂತ, ಕ್ರೈಸ್ತ ಮತ ಸುಧಾರಕ, ಭಗವತ್ಸೇವಾತತ್ಪರ, ಭಗವಂತನಲ್ಲಿ ವಿನಯ ಮತ್ತು ವಿಧೇಯತೆಗಳು ಮೂರ್ತಿವೆತ್ತ ಶಾಂತಸ್ವರೂಪ; ಭಗವಂತನಿಗಾಗಿ ಹಲವಾರು ಸಂಕಟಗಳನ್ನೂ, ಅತೀವ ದೈಹಿಕ ಯಾತನೆಯನ್ನೂ ಅನುಭವಿಸಿದ ಸಹನಾಮೂರ್ತಿ; ಇಷ್ಟೆಲ್ಲ ಕಷ್ಟಗಳ ನಡುವೆಯೂ ಭಗವಂತನ ಭಜನಾನಂದದಿಂದ ಹೊರಹೊಮ್ಮಿ ಬರುವ ಭಗವದಾನಂದದ ಆಸ್ವಾದಕ – ಅಸಿಸ್ಸಿಯ ಸಂತ ಫ್ರಾನ್ಸಿಸ್.

## ಬಾಲ್ಯ-ಯೌವನದ ದಿನಗಳು

ಫ್ರಾನ್ಸಿಸ್ ಹುಟ್ಟಿದ್ದು ಇಟಲಿಯ ಅಸಿಸ್ಸಿ ಎಂಬ ನಗರದಲ್ಲಿ. ೧೧೮೧ ರ ಕಡೆಯ ಭಾಗ ಅಥವಾ ೧೧೮೨ರ ಮೊದಲ ಭಾಗದಲ್ಲಿ. ತಂದೆ ಪಿಯೆಟ್ರೋ ಡಿ ಬರ್ನಾರ್‌ಡೋನ್ ಶ್ರೀಮಂತ ಜವಳಿ ವರ್ತಕ. ತಾಯಿ ಪಿಕಾ ಡೆ ಬೌರ್ಲೆಮಂಟ್ ದೈವಭಕ್ತ ಮಹಿಳೆ. ಈ ದಂಪತಿಗಳಿಗೆ ಏಳನೆಯ ಮಗುವಾಗಿ ಫ್ರಾನ್ಸಿಸ್ ಹುಟ್ಟಿದನು. ಫ್ರಾನ್ಸಿಸ್ ಹುಟ್ಟಿದಾಗ ಅವನ ತಂದೆ ವ್ಯಾಪಾರಕ್ಕಾಗಿ ಫ್ರಾನ್ಸ್ ದೇಶಕ್ಕೆ ಹೋಗಿದ್ದನು. ಅಲ್ಲಿ ಅವನು ಬಹಳ ಕಾಲ ಕಳೆದಿರಬೇಕು. ಅಷ್ಟರಲ್ಲಿ ಮಗುವಿಗೆ ನಾಮಕರಣವಾಯಿತು. ಗಿಯೊವನ್ನಿ ಎಂದು ಆಕೆಯ ತಾಯಿ ಅವನಿಗೆ ಹೆಸರಿಟ್ಟಳು. ಕೆಲದಿನಗಳು ಕಳೆದ ನಂತರ ವರ್ತಕನು ಮನೆಗೆ ತಿರುಗಿ ಬಂದನು. ಆಗತಾನೇ ಫ್ರಾನ್ಸ್ ದೇಶದಿಂದ ವಾಪಸ್ಸು ಬಂದಿದ್ದನಷ್ಟೇ. ಅಲ್ಲಿ ಅವನಿಗೆ ಭಾರೀ ವ್ಯಾಪಾರವಾಗಿದ್ದಿರಬೇಕು. ಅಥವಾ ಫ್ರಾನ್ಸ್ ದೇಶದ ಬಗ್ಗೆ, ಅಲ್ಲಿನ ಜನರ ಬಗ್ಗೆ ಮತ್ತು ಸಂಸ್ಕೃತಿಯ ಬಗ್ಗೆ ಬಹು ಮೆಚ್ಚುಗೆ ಮೂಡಿರಬೇಕು. ಅದಕ್ಕೆಂದೇ ಅವನು ತಾನಿಲ್ಲದಾಗ ಹುಟ್ಟಿದ ಮಗುವಿಗೆ ಫ್ರಾನ್ಸ್ ದೇಶದ ಗುರುತಾಗಿ ಫ್ರಾನ್ಸಿಸ್ ಎಂದು ಹೆಸರು ಬದಲಿಸಿದನು. ಕೆಲವು ಲೇಖಕರು ಹೀಗೂ ಹೇಳುತ್ತಾರೆ: ಮಗುವಿನ ತಾಯಿ ಫ್ರಾನ್ಸ್ ದೇಶದಿಂದ ಬಂದವಳು. ಅವಳ ಮೇಲಿನ ಪ್ರೀತಿಯಿಂದಾಗಿ, ತಂದೆಯು ಈ ಹೆಸರನ್ನು ಇಟ್ಟನು ಎಂದು. ಏನೇ ಇರಲಿ, ಶಿಶು ಗಿಯೋವನ್ನಿಯು ಈಗ ಫ್ರಾನ್ಸಿಸ್ ಎಂಬ ಹೊಸ ಹೆಸರನ್ನು ಪಡೆಯಿತು.

ಹುಡುಗನಿದ್ದಾಗ, ಫ್ರಾನ್ಸಿಸ್ ಮೃದುಸ್ವಭಾವದವನಾಗಿದ್ದನು. ಆದರೂ, ಅವನಿಗೆ ಆಟ, ತಮಾಷೆ, ಕೀಟಲೆ ಮಾಡುವುದು – ಇವೆಲ್ಲ ಬಹಳ ಇಷ್ಟ. ಯಾವತ್ತೂ ಏನಾದರೊಂದು ವಿನೋದವನ್ನು ಹುಡುಕಿಕೊಂಡು ಹೋಗುತ್ತಿದ್ದನು. ಊರಿನ ಜನರೆಲ್ಲ ಅವನನ್ನು ಇಷ್ಟಪಡುತ್ತಿದ್ದರು. ಸಂತ ಜಾರ್ಜ್ ಚರ್ಚ್ ಶಾಲೆಯಲ್ಲಿ ಅವನು ಲ್ಯಾಟಿನ್ ಭಾಷೆಯನ್ನು ಓದಲು ಮತ್ತು ಬರೆಯಲು ಕಲಿತನು. ಅವನ ತಂದೆ ಫ್ರಾನ್ಸ್ ದೇಶಕ್ಕೆ ಅಡಿಗಡಿಗೆ ಹೋಗುತ್ತಿದುದರಿಂದ, ಅವನಿಂದ ಫ್ರೆಂಚ್ ಭಾಷೆಯನ್ನೂ ಕಲಿತನು.

ಯೌವನದ ಅಡೆತಡೆಯಿಲ್ಲದ ಹುಚ್ಚು ಪ್ರವಾಹದಲ್ಲಿ ಫ್ರಾನ್ಸಿಸ್ ಕೊಚ್ಚಿಹೋದನು. ಧನಿಕ ವರ್ತಕನ ಮಗನಾದ್ದರಿಂದ ಬಹಳ ವಿಷಯ ಲಂಪಟ ಜೀವನವನ್ನು ನಡೆಸುತ್ತಿದ್ದನು. ಆಗಿನ ಕಾಲದಲ್ಲಿ ಧನಿಕ ಯುವಕರು ಸೈನ್ಯವನ್ನು ಸೇರಲು ಇಷ್ಟಪಡುತ್ತಿದ್ದರು. ವೀರಯೋಧರಾಗಿ ಹೆಸರು ಕೀರ್ತಿಗಳನ್ನು ಪಡೆದುಕೊಳ್ಳಬೇಕೆಂದು ಹಾತೊರೆಯುತ್ತಿದ್ದರು. ಅವರಿಗೆ ಜೀವನದ ಉದ್ದೇಶವೆಂಬುದು ಅದೇ ಆಗಿತ್ತು. ಅಂತಹ ಯುವಕರ ಗುಂಪಿಗೆ ಫ್ರಾನ್ಸಿಸ್ ಕೂಡ ಸೇರಿಕೊಂಡನು. ವೀರಯೋಧನ ವೈಭವಯುತ ರಮಣೀಯ ಬಾಳುವೆಯ ಕನಸು ಕಾಣತೊಡಗಿದನು. ಆಗಿನ ಕಾಲದಲ್ಲಿ ಇಟಲಿಯ ನಗರಗಳ ನಡುವೆ ಕಲಹಗಳು ನಡೆಯುತ್ತಿದ್ದವು. ಅಸಿಸ್ಸಿಯ ಜನರು ಪೆರುಗಿಯಾ ಎಂಬ ಊರಿನ ಜನರ ವಿರುದ್ಧ ೧೨೦೧ರಲ್ಲಿ ಯುದ್ಧ ಮಾಡಲು ಹೋದರು. ಆ ಸೈನ್ಯಕ್ಕೆ ಫ್ರಾನ್ಸಿಸ್ ಕೂಡ ಸೇರಿಕೊಂಡನು. ಯುದ್ಧದಲ್ಲಿ ಅಸಿಸ್ಸಿಯ ಸೈನ್ಯ ಸೋತುಹೋಯಿತು. ಫ್ರಾನ್ಸಿಸ್ ಸೆರೆಯಾಳಾಗಿ ಸಿಕ್ಕಿಬಿದ್ದನು. ಒಂದು ವರ್ಷ ಸೆರೆಮನೆಯಲ್ಲಿ ಕಳೆದನು. ಆದರೆ ಅದನ್ನೇನೂ ಅವನು ಮನಸ್ಸಿಗೆ ಹಚ್ಚಿಕೊಂಡಿರಲಿಲ್ಲ. ಸೆರೆಮನೆಯ ದಿನಗಳನ್ನು ಆನಂದವಾಗಿಯೇ ಕಳೆದನು. ಸೆರೆಸಿಕ್ಕ ಸೈನಿಕರ ನಡುವೆ ಅವನ ಹೆಸರು ಜನಜನಿತವಾಯಿತು. ಕಾರಾಗಾರದ ಈ ಅನುಭವವು ಮುಂದಿನ ದಿನಗಳಲ್ಲಿ ಅವನಲ್ಲಿ ಉಂಟಾದ ಆಧ್ಯಾತ್ಮಿಕ ವಿಕಸನದ ಬೇರಿನಂತೆ ಇದೆ ಎಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

೧೨೦೩ರಲ್ಲಿ ಮರಳಿ ಮನೆಗೆ ಬಂದ ಫ್ರಾನ್ಸಿಸ್, ತನ್ನ ಮೊದಲಿನ ಜೀವನಶೈಲಿಯನ್ನೇ ಮುಂದುವರೆಸಿದನು. ೧೨೦೪ರಲ್ಲಿ ಕೆಲಕಾಲ ಅನಾರೋಗ್ಯದಿಂದ ನರಳಿದನು. ಇದು ಅವನಲ್ಲಿ ಆಧ್ಯಾತ್ಮಿಕ ತುಮುಲವನ್ನು ಉಂಟುಮಾಡಿತು ಎಂದು ಹೇಳುತ್ತಾರೆ. ಮತ್ತೆ ೧೨೦೫ರ ಕಡೆಯ ಭಾಗದಲ್ಲಿ ಮತ್ತೊಂದು ಯುದ್ಧಕ್ಕೆ ಸೇರಲು ಫ್ರಾನ್ಸಿಸ್ ಹೊರಟನು. ತನ್ನ ವಿರುದ್ಧ ಬಂಡಾಯ ಹೂಡಿದ್ದ ಅಪುಲಿಯಾದ ಎರಡನೆಯ ಫ್ರೆಡ್ರಿಕ್ ರಾಜನ ವಿರುದ್ಧ, ಕ್ಯಾಥೊಲಿಕ್ ಮತದ ಸರ್ವಶ್ರೇಷ್ಠ ಮಠಾ

ಧ್ಯಕ್ಷನಾದ ಪೋಪ್ ಒಂದು ಸೈನ್ಯವನ್ನು ಕಳಿಸಿದನು. ಕೌಂಟ್ ಗೆಂಟೈಲ್ ಎಂಬ ಸೈನ್ಯಾಧಿಕಾರಿಯ ನೇತೃತ್ವದಲ್ಲಿ ಸೈನ್ಯ ಹೊರಟಿತ್ತು. ಅದಕ್ಕೆ ಫ್ರಾನ್ಸಿಸ್ ಕೂಡ ಸೇರಿಕೊಂಡನು. ಆದರೆ ಸ್ವಲ್ಪ ದಾರಿಯನ್ನು ಕ್ರಮಿಸುವಷ್ಟರಲ್ಲಿ ಸ್ಪೋಲೆಟೋ ಎಂಬಲ್ಲಿ ಅವನಿಗೆ ಒಂದು ದಿವ್ಯದರ್ಶನವಾಯಿತು. ಒಡನೆ ಅಸಿಸ್ಸಿಗೆ ವಾಪಸ್ಸು ಹೋಗುವಂತೆಯೂ, ಮನುಷ್ಯಮಾತ್ರನನ್ನು ಸೇವೆಮಾಡುವ ಬದಲು ಭಗವಂತನ ಸೇವೆ ಮಾಡುವಂತೆಯೂ ಆ ದರ್ಶನದಲ್ಲಿ ಅವನಿಗೆ ಆದೇಶವಾಯಿತು. ''ಯುದ್ಧ ನಾಯಕನಾಗುವ ಬದಲು ಇನ್ನೊಂದು ಬಗೆಯ ನಾಯಕನಾಗುವ ಅವಕಾಶ ನಿನಗೆ ಪ್ರಾಪ್ತವಾಗಿದೆ. ಅದಕ್ಕಾಗಿ ಮುಂದಿನ ದಿನಗಳಲ್ಲಿ ಒಂದು ದಿವ್ಯಕರೆಯು ನಿನ್ನನ್ನು ಆಹ್ವಾನಿಸುವುದು. ಅದಕ್ಕಾಗಿ ನಿರೀಕ್ಷೆ ಮಾಡು'' ಎಂದು ಆ ದಿವ್ಯವಾಣಿಯು ಫ್ರಾನ್ಸಿಸ್‌ಗೆ ಆಜ್ಞೆಮಾಡಿತು. ಇದಕ್ಕೆ ಮನ್ನಣೆಕೊಟ್ಟ ಫ್ರಾನ್ಸಿಸ್, ಮನೆಗೆ ವಾಪಸ್ಸು ಬಂದನು. ಏಕಾಂತದಲ್ಲಿ ಕಾಲ ಕಳೆಯುತ್ತ, ಭಗವಂತನ ಪ್ರಾರ್ಥನೆಯಲ್ಲಿ ಸಂಪೂರ್ಣ ಮಗ್ನನಾದನು. ಆ ಮೂಲಕ ಭಗವಂತನ ಇಚ್ಛೆಯನ್ನು ಅರಿತುಕೊಳ್ಳುವ ಪ್ರಯತ್ನ ಮಾಡತೊಡಗಿದನು. ಈ ಸಂದರ್ಭದಲ್ಲಿ ಭಗವಾನ್ ಏಸುಕ್ರಿಸ್ತನು ಶಿಲುಬೆಯ ಮೇಲೆ ನರಳುತ್ತಿದ್ದ ಅಪೂರ್ವ ದರ್ಶನವನ್ನು ಅವನು ಪಡೆದುಕೊಂಡನು.

ಇದೇ ಸಂದರ್ಭದಲ್ಲಿ ಫ್ರಾನ್ಸಿಸ್‌ನ ವ್ಯಕ್ತಿತ್ವದ ಇನ್ನೊಂದು ಮೇರುಗುಣವು ಬೆಳಕಿಗೆ ಬರುತ್ತ ಹೋಯಿತು. ಅದೇ ಬಡವರ ಮೇಲೆ ಅವನಿಗಿದ್ದ ಅಸಾಧಾರಣ ಅನುಕಂಪೆ. ಅಸಿಸ್ಸಿ ನಗರದ ಬಡ ಪಾದ್ರಿಗಳು ಮತ್ತು ಸಂತ್ರಸ್ತರಿಗೆ ತನ್ನ ಕೈಲಾದಷ್ಟು ಸಹಾಯವನ್ನು ಅವನು ಮಾಡ ಲಾರಂಭಿಸಿದನು. ನಿರ್ಗತಿಕರ ಜೊತೆಗೆ ಬೆರೆಯಲಾರಂಭಿಸಿದನು. ಕೆಲಕಾಲದ ನಂತರ ಫ್ರಾನ್ಸಿಸ್ ರೋಮ್ ಮಹಾನಗರಕ್ಕೆ ತೀರ್ಥಯಾತ್ರೆಗೆ ಹೋದನು. ಅಲ್ಲಿ ಏಸುಕ್ರಿಸ್ತನ ಸಂದೇಶವಾಹಕನಾಗಿದ್ದ ಸಂತ ಪೀಟರನ ಸಮಾಧಿ ಇದೆ. ರೋಮ್ ನಗರದಲ್ಲಿ ಇದ್ದಾಗ, ಒಂದು ಇಡೀ ದಿನ ಬಡವನ ಹಾಗೆ ಚಿಂದಿ ಬಟ್ಟೆಯನ್ನು ಉಟ್ಟುಕೊಂಡನು. ಸಂತ ಪೀಟರನ ಸಮಾಧಿಸ್ಥಳದ ಹತ್ತಿರ ಭಿಕ್ಷೆ ಬೇಡುತ್ತಿದ್ದ ಭಿಕ್ಷುಕರ ನಡುವೆ ನಿಂತು, ತಾನೂ ಭಿಕ್ಷೆ ಬೇಡಿದನು. ಮುಂದೊಂದು ದಿನ ಕುಷ್ಠರೋಗಿಯೊಬ್ಬನಿಗೆ ಭಿಕ್ಷೆ ಕೊಟ್ಟದ್ದಲ್ಲದೆ, ಅವನನ್ನು ತಬ್ಬಿಕೊಂಡನು. ಈ ಬಗೆಯ ಹಲವು ಘಟನೆಗಳನ್ನು ಅವನ ಜೀವನ ಚರಿತ್ರೆಕಾರರು ದಾಖಲಿಸಿದ್ದಾರೆ.

ಇವೆಲ್ಲ ಘಟನೆಗಳ ನಡುವಿನ ರತ್ನಪ್ರಾಯವಾದ ಒಂದು ಘಟನೆ ಹೀಗಿದೆ: ಈ ಘಟನೆಯು ಫ್ರಾನ್ಸಿಸ್‌ನ ಜೀವನದಲ್ಲಿ ಮಹತ್ತರ ಆಧ್ಯಾತ್ಮಿಕ ಪರಿವರ್ತನೆಯನ್ನು ಉಂಟುಮಾಡಿತು. ತನ್ನ ಏಕಾಂತ ಸಾಧನೆಯ ಸಂದರ್ಭದಲ್ಲಿ ಫ್ರಾನ್ಸಿಸ್ ಅಸಿಸ್ಸಿಯ ಹೊರವಲಯದಲ್ಲಿ ಪಾಳುಬಿದ್ದಿದ್ದ ಒಂದು ಚರ್ಚ್‌ಗೆ ಹೋಗಿ ಪ್ರಾರ್ಥನೆ ಮಾಡುತ್ತಿದ್ದನು. ಅದರ ಹೆಸರು ಸ್ಯಾನ್ ಡಮಿಯಾನೋ ಪ್ರಾರ್ಥನಾಮಂದಿರ ಎಂದು. ಆ ಸಂದರ್ಭದಲ್ಲಿ ವೇದಿಕೆಯ ಮೇಲಿನ ಶಿಲುಬೆಯ ಆಕೃತಿಯು ಅವನಿಗೆ ಈ ಆದೇಶವನ್ನು ನೀಡಿತು: ''ಹೋಗು, ಫ್ರಾನ್ಸಿಸ್, ನನ್ನ ಮನೆಯ ನವೀಕರಣ ಮಾಡು. ನೀನೇ ನೋಡುತ್ತಿದ್ದೀಯಲ್ಲ, ಇದು ಎಷ್ಟು ಜೀರ್ಣಾವಸ್ಥೆಯಲ್ಲಿದೆ ಎಂಬುದನ್ನು.' ಇದನ್ನು ಫ್ರಾನ್ಸಿಸ್ ಅಕ್ಷರಶಃ ಅನುಸರಿಸಿದ. ಮನೆಗೆ ಓಡಿಹೋಗಿ, ತನ್ನ ತಂದೆಯ ಅಂಗಡಿಯಿಂದ ಬೆಲೆಬಾಳುವ ಬಟ್ಟೆಗಳನ್ನು ಎತ್ತಿಕೊಂಡು ಬಂದ. ಅವನ್ನು ಕುದುರೆಯಲ್ಲಿ ಹೊತ್ತುಕೊಂಡು, ಫೊಲಿಗೊ ಎಂಬ ಹತ್ತಿರದ ನಗರಕ್ಕೆ ಹೋದ. ಅಲ್ಲಿ ಬಟ್ಟೆಯನ್ನು ಮಾರಿದ; ಅಲ್ಲದೆ ಕುದುರೆಯನ್ನೂ ಮಾರಿಬಿಟ್ಟ. ಅದರಿಂದ ಬಂದ ಹಣವನ್ನು ಸ್ಯಾನ್ ಡಮಿಯಾನೋ ಪ್ರಾರ್ಥನಾ ಮಂದಿರದ ಪಾದ್ರಿಗೆ ನೀಡಲು ಹೋದ. ಆದರೆ ಆ ಪಾದ್ರಿಯು ಆ ಹಣವನ್ನು ಸ್ವೀಕರಿಸಲು ನಿರಾಕರಿಸಿದ. ಇದರಿಂದ ನಿರಾಶನಾದ ಫ್ರಾನ್ಸಿಸ್ ಆ ಹಣವನ್ನು ಕಿಟಿಕಿಯ ಹೊರಗಡೆ ಎಸೆದುಬಿಟ್ಟನಂತೆ. ಇದರಿಂದ ಅವನ ತಂದೆಗೆ ಬಹಳ ಕೋಪ ಬಂತು. ಮಗನನ್ನು ಮನೆಯಲ್ಲಿಯೇ ಕೂಡಿಹಾಕಿದ. ಅಷ್ಟೇ ಅಲ್ಲ, ಸ್ವಂತ ಮಗನ ವಿರುದ್ಧವೇ ಊರಿನ ಅಧಿಕಾರಿಗಳಲ್ಲಿ ದೂರನ್ನು ದಾಖಲಿಸಿದ. ಅಧಿಕಾರಿಗಳು ಫ್ರಾನ್ಸಿಸ್‌ಗೆ ಬುಲಾವು ಕಳಿಸಿದರು. ಆದರೆ ಅವನು ಹಾಜರಾಗಲು ನಿರಾಕರಿಸಿದ. ಇದರಿಂದ ನೊಂದ ಫ್ರಾನ್ಸಿಸ್‌ನ ತಂದೆ, ಊರಿನ ಬಿಷಪ್‌ನ ಹತ್ತಿರವೂ ದೂರನ್ನು ಕೊಂಡೊಯ್ದ. ಅಲ್ಲಿಗೆ ಹಾಜರಾದ ಫ್ರಾನ್ಸಿಸ್ ತನ್ನ ವಿರುದ್ಧ ದೋಷಾರೋಪಣೆ ಮಾಡುವ ಮುಂಚೆಯೇ, ಒಂದು ಮಾತನ್ನೂ ಆಡದೆ, ತನ್ನೆಲ್ಲ ಬಟ್ಟೆಗಳನ್ನು ಬಿಚ್ಚಿ ತಂದೆಗೆ ಕೊಟ್ಟುಬಿಟ್ಟ. ಪೂರ್ತಿ ನಗ್ನನಾಗಿ ನಿಂತುಬಿಟ್ಟ. ನಂತರವಷ್ಟೇ ಬಾಯಿಬಿಟ್ಟ : ''ಇದುವರೆಗೆ ನಿನ್ನನ್ನು ಈ ಭೂಮಿಯ ತಂದೆಯೆಂದು ಕರೆದು ಗೌರವಿಸುತ್ತಿದ್ದೆ. ಆದರೆ ಇನ್ನು ಮೇಲೆ ನಾನು ನಿಜವಾದ ಸತ್ಯವನ್ನೇ ನುಡಿಯುತ್ತೇನೆ: ಸ್ವರ್ಗದಲ್ಲಿರುವ ಪಿತನೇ ನನ್ನ ನಿಜವಾದ ತಂದೆ.'' ಇದನ್ನು ಕೇಳಿ ಬಿಷಪ್ ಆಶ್ಚರ್ಯಗೊಂಡನು. ಒಡನೆ ಅವನಿಗೆ ನಿಲುವಂಗಿಯೊಂದನ್ನು ನೀಡಿದನು. ಅದನ್ನು ಹೊದ್ದುಕೊಂಡು, ಊರಿನ ಪಕ್ಕದಲ್ಲಿಯೇ ಇರುವ ಸುಬಸಿಯೊ ಪರ್ವತದ ಅರಣ್ಯಪ್ರದೇಶಕ್ಕೆ ನಡೆದೇ ಬಿಟ್ಟ. ಇದು ನಡೆದಿದ್ದು ೧೨೦೬ರಲ್ಲಿ. ಆಗ ಫ್ರಾನ್ಸಿಸ್‌ಗೆ ಕೇವಲ ೨೫ ವರ್ಷ ವಯಸ್ಸು.


ಫ್ರಾನ್ಸಿಸ್ ವಸ್ತ್ರವನ್ನೆಲ್ಲ ಬಿಚ್ಚಿ ತಂದೆಗಿತ್ತ